ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 24–09–2020

# ಮಾಧ್ಯಮ ಆಮಂತ್ರಣ

1) ಧನ್ಯಾರ್ಥ ಕವನ ಸಂಕಲ ಬಿಡುಗಡೆ ಸಮಾರಂಭ :

ಅಧ್ಯಕ್ಷತೆ :

ಪ್ರವೀಣ್ ಸೂದ್, ಐ.ಪಿ.ಎಸ್.
ಡಿಜಿ ಮತ್ತು ಐ.ಪಿ.ಜಿ. ಕರ್ನಾಟಕ ರಾಜ್ಯ

ಕೃತಿ ಲೋಕಾರ್ಪಣೆ ಮತ್ತು ಕೃತಿ ಕುರಿತು
ಡಾ: ಮನು ಬಳಿಗಾರ್,
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಉಪಸ್ಥಿತಿ :
ಡಾ : ಎಸ್. ಪರಶಿವಮೂರ್ತಿ, ಐ.ಪಿ.ಎಸ್.,
ಎಡಿಜಿಪಿ (ಅಪರಾಧ ಮತ್ತು ತಾಂತ್ರಿಕ ಸೇವೆಗಳು) ಬೆಂಗಳೂರು

ದಿನಾಂಕ : 25–09–2020 ಶುಕ್ರವಾರ ಸಮಯ : ಮಧ್ಯಾಹ್ನ 12–30 ಗಂಟೆಗೆ
ಸ್ಥಳ : ಪೊಲೀಸ್ ಕೇಂದ್ರ ಕಚೇರಿಯ ಸಭಾಂಗಣ, ನೃಪತುಂಗ ರಸ್ತೆ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಕೇಂದ್ರ ಸಚಿವ ಸುರೇಶ್ ಅಂಗಡಿ ನಿಧನಕ್ಕೆ ವಿಧಾನಪರಿಷತ್‌ನಲ್ಲಿಂದು ಸಂತಾಪ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ):

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ಸುರೇಶ್ ಅಂಗಡಿ ಅವರ ನಿಧನಕ್ಕೆ ವಿಧಾನಪರಿಷತ್ ಸಭಾಪತಿಗಳಾದ ಕೆ.ಪ್ರತಾಪಚಂದ್ರ ಶೆಟ್ಟಿ ಹಾಗೂ ಸದನದ ಸದಸ್ಯರುಗಳು

ಇಂದು ನಡೆದ ವಿಧಾನಪರಿಷತ್ ಅಧಿವೇಶನದಲ್ಲಿ ಸಂತಾಪ ಸೂಚಿಸಿದರು. ನಂತರ ಒಂದು ನಿಮಿಷದ ಮೌನಾಚರಣೆ ನಡೆಸಿ ಕಲಾಪವನ್ನು ಮುಂದುವರಿಸಿದರು.

## ಶಾಸಕರ ಮೂರು ತಿಂಗಳ ಸಂಬಳ ನೀಡಲು ತೀರ್ಮಾನ : ಸಚಿವ ಜೆ.ಸಿ. ಮಾಧುಸ್ವಾಮಿ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ):

ಕೋವಿಡ್-19 ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಪಕ್ಷದ ನಾಯಕರ ಜೊತೆ ಚರ್ಚಿಸಿ, ಮಂತ್ರಿಗಳು, ಸಭಾಪತಿಗಳು, ವಿಧಾನ ಮಂಡಲದ ಸದಸ್ಯರುಗಳು ಸೇರಿದಂತೆ ಒಂದು ವರ್ಷದಲ್ಲಿ 3 ತಿಂಗಳ ವೇತನವನ್ನು ನೀಡಲು ತೀರ್ಮಾನಿಸಲಾಗಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಅವರು ಇಂದು ವಿಧಾನ ಪರಿಷತ್ ಅಧಿವೇಶನದಲ್ಲಿ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ " ಕರ್ನಾಟಕ ವಿಧಾನ ಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ " ವನ್ನು ಮಂಡಿಸಿ ಮಾತನಾಡಿದರು.

ಸದನದಲ್ಲಿ ಪಕ್ಷಭೇದ ಮರೆತು ಎಲ್ಲಾ ಸದಸ್ಯರು ಸಹಾನುಮತದಿಂದ ಒಪ್ಪಿಗೆ ನೀಡಿದ ಕಾರಣ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಲಾಯಿತು.

## ಖಾಸಗಿ ಆಸ್ಪತ್ರೆಗಳ ನೋಂದಣಿ ಹಾಗೂ ದೂರು ವಿಚಾರಣೆ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಬಿಬಿಎಂಪಿ ಆಯುಕ್ತರ ನೇಮಕ : ಸಚಿವ ಶ್ರೀರಾಮುಲು

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ):

ಬೆಂಗಳೂರು ನಗರದ ಖಾಸಗಿ ಆಸ್ಪತ್ರೆಗಳ ನೋಂದಣಿ ಹಾಗೂ ಕುಂದು-ಕೊರತೆಗಳ ವಿಚಾರಣೆ ಈವರೆಗೆ ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿದ್ದು, ನಗರ ವ್ಯಾಪ್ತಿಯು ವಿಸ್ತರಣೆಯಾಗಿರುವುದರಿಂದ ಹಾಗೂ ಆಯುಕ್ತರೆ ಕೊರೋನಾ ನೋಡೆಲ್ ಅಧಿಕಾರಿಯಾಗಿರುವುದರಿಂದ ಬಿಬಿಎಂಪಿ ಆಯುಕ್ತರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಶ್ರೀರಾಮುಲು ತಿಳಿಸಿದರು.

ಅವರು ಇಂದು ವಿಧಾನ ಪರಿಷತ್‌ನಲ್ಲಿ 2020ನೇ ಸಾಲಿನ " ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಿದ ಸಂದರ್ಭದಲ್ಲಿ ಮಾತನಾಡಿದರು.

ಸಭಾಪತಿಗಳು ಸಚಿವರ ಪ್ರಸ್ತಾಪವನ್ನು ಅಂಗೀಕರಿಸಿ, ವಿಧೇಯಕಕ್ಕೆ ಅನುಮೋದನೆ ನೀಡಿದರು.

## ಲೋಕಾಯುಕ್ತಕ್ಕೆ ದೂರು ಬಂದ ಮೂರು ತಿಂಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು : ಜೆ.ಸಿ. ಮಾಧುಸ್ವಾಮಿ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ): ಲೋಕಾಯುಕ್ತಕ್ಕೆ ದೂರು ಬಂದರೆ ಪ್ರಾಥಮಿಕ ಹಂತದಲ್ಲಿ ಮೂರು ತಿಂಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. ಆಗದಿದ್ದ ಪಕ್ಷದಲ್ಲಿ ಲಿಖಿತವಾಗಿ ಕಾರಣಗಳನ್ನು ನೀಡಿ ಮೂರು ತಿಂಗಳ ಕಾಲಾವಕಾಶ ಪಡೆದು ಇತ್ಯರ್ಥಪಡಿಸಬೇಕು. ಅಂತಿಮವಾಗಿ ಆರು ತಿಂಗಳಲ್ಲಿ ಇತ್ಯರ್ಥಪಡಿಸಬೇಕು. ಆಗದಿದ್ದರೆ ಕಾರಣಗಳನ್ನು ಲಿಖಿತ ರೂಪದಲ್ಲಿ ನೀಡಿ ಆರು ತಿಂಗಳ ಕಾಲಾವಶಕಾಶ ಪಡೆದು ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ ತೀರ್ಮಾನಿಸಲಾಗಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಅವರು ಇಂದು ವಿಧಾನಪರಿಷತ್ ಕಲಾಪದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪರವಾಗಿ 2020ನೇ ಸಾಲಿನ "ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕ" ವನ್ನು ಪ್ರಸ್ತಾಪಿಸಿದರು.

ವಿರೋಧ ಪಕ್ಷದ ನಾಯಕರು ಈ ತಿದ್ದುಪಡಿಯನ್ನು ಸ್ವಾಗತಿಸಿದರು. ನಂತರ ಸಭಾಪತಿಗಳು ವಿಧೇಯಕವನ್ನು ಅಂಗೀಕರಿಸಿ ಅನುಮೋದನೆ ನೀಡಿದರು.

## ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ವಿಧೇಯಕ 2020 ಅಂಗೀಕಾರ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ): ನ್ಯಾಯಾಲಯದ ನಿರ್ದೇಶನದಂತೆ ಭಿಕ್ಷುಕರು ಮಾನಸಿಕ ಅಸ್ವಸ್ಥರಾದರೆ, ಕುಷ್ಠರೋಗ ಹಾಗೂ ಮಾರಣಾಂತಿಕ ಕಾಯಿಲೆಯಿಂದ ನರಳುತ್ತಿದ್ದರೆ , ಬಂಧನದಲ್ಲಿರುವವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಬೇಕು. ಚಿಕಿತ್ಸೆಯ ನಂತರ ನ್ಯಾಯಾಲಯವು ಭಿಕ್ಷುಕರನ್ನು ಎಲ್ಲಿಗೆ ಸೇರಿಸಬೇಕು ಎಂದು ನಿರ್ದೇಶನ ನೀಡುತ್ತದೆಯೊ ಅಲ್ಲಿಗೆ ಸೇರಿಸಬೇಕು ಎಂದು ತಿದ್ದುಪಡಿ ತರಲಾಗಿದೆ ಎಂದು ಕಾನೂನು, ಸಂಸದೀತ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಅವರು ಇಂದು ವಿಧಾನಪರಿಷತ್ ಕಲಾಪದಲ್ಲಿ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವ ಗೋವಿಂದ ಎಂ.ಕಾರಜೋಳ ಪರವಾಗಿ 2020ನೇ ಸಾಲಿನ " ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಪ್ರಸ್ತಾವನೆ ಮಾಡಿದರು. ಈ ಸಂದರ್ಭದಲ್ಲಿ ಸದನವು ಪ್ರಸ್ತಾವನೆಯನ್ನು ಅಂಗೀಕರಿಸಿ ವಿಧೇಯಕಕ್ಕೆ ಅನುಮೋದನೆ ನೀಡಿತು.

## ವಿಧಾನಪರಿತ್‌ನಲ್ಲಿಂದು ಹಲವು ವಿಧೇಯಕಗಳ ಅಂಗೀಕಾರ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ): ವಿಧಾನ ಪರಿಷತ್ ಕಲಾಪದಲ್ಲಿಂದು 2020ನೇ ಸಾಲಿನ " ಕನ್ನಡ ವಿಶ್ವವಿದ್ಯಾನಿಲಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಸಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ " ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ( ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ವಿಧೇಯಕವನ್ನು ಅಂಗೀಕರಸಲಾಯಿತು.

2020ನೇ ಸಾಲಿನ " ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ " ವನ್ನು ಅಂಗೀಕರಿಸಲಾಯಿತು.

2020ನೇ ಸಾಲಿನ " ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ವಿಧೇಯಕದ ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

## **ವಿಧಾನ ಸಭೆಯಲ್ಲಿ ವಿಧೇಯಕಗಳ ಮಂಡನೆ**

**ಬೆಂಗಳೂರು, ಸೆಪ್ಟಂಬರ್ 23 (ಕರ್ನಾಟಕ ವಾರ್ತೆ):**

**ಇಂದು ನಡೆದ ವಿಧಾನಸಭೆಯ ಕಲಾಪದಲ್ಲಿ ವಿವಿಧ ವಿಧೇಯಕಗಳನ್ನು ಮಂಡಿಸಲಾಯಿತು. 2020–21ನೇ ಸಾಲಿನ ಕರ್ನಾಟಕ ಸಾದಿಲ್ವಾರು ನಿಧಿ(ತಿದ್ದುಪಡಿ) ವಿಧೇಯಕವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರವಾಗಿ ಕಂದಾಯ ಸಚಿವ ಆರ್. ಅಶೋಕ್ ಅವರು ಮಂಡಿಸಿದರು.**

**2020ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವ ಆರ್. ಅಶೋಕ್ ಅವರು ಮಂಡಿಸಿದರು.**

**2020ನೇ ಸಾಲಿನ ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಕಾರ್ಮಿಕ ಮತ್ತು ಸಕ್ಕರೆ ಸಚಿವ ಅರಬೈಲ್ ಶಿವರಾಮ್ ಹೆಬ್ಬಾರ್ ಮಂಡಿಸಿದರು.**

**2020ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ.3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಮಂಡಿಸಿದರು.**

**2020ನೇ ಸಾಲಿನ ಕರ್ನಾಟಕ ಸಾದಿಲ್ವಾರು ನಿಧಿ(ತಿದ್ದುಪಡಿ) ವಿಧೇಯಕವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಮಂಡಿಸಿದರು.**

## ವಿಧಾನಸಭೆಯಲ್ಲಿಂದು ದಿವಂಗತ ಸುರೇಶ್. ಸಿ. ಅಂಗಡಿಯವರಿಗೆ ಶ್ರದ್ಧಾಂಜಲಿ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ):

**ಬೆಳಗಾವಿ ಸಂಸದರಾಗಿದ್ದ ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವ ಸುರೇಶ ಸಿ ಅಂಗಡಿ ಅವರು ಪ್ರಮಾಣಿಕ ರಾಜಕಾರಣಿಯಾಗಿದ್ದರು, ರಾಜ್ಯದ ಹಲವು ಅಭಿವೃದ್ಧಿ ಕಾರ್ಯಗಳಲ್ಲಿ ಅವರ ಕೊಡುಗೆ ಅಪಾರ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.**

**ಕೋವಿಡ್‌ನಿಂದ ಮರಣ ಹೊಂದಿದ ಕೇಂದ್ರಸಚಿವ ಸುರೇಶ್ ಅಂಗಡಿಯವರಿಗೆ ಇಂದು ವಿಧಾನಸಭೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ಮುಖ್ಯಮಂತ್ರಿಗಳು ಹುಬ್ಬಳ್ಳಿಯಲ್ಲಿ ರೈಲ್ವೆ ವಸ್ತು ಸಂಗ್ರಹಾಲಯದ ಸ್ಥಾಪನೆ. ಹುಬ್ಬಳ್ಳಿ ಜಂಕ್ಷನ್‌ನಲ್ಲಿ ಹಲವು ಸುಧಾರಣೆಗಳನ್ನು ತಂದವರು ಅವರು ಎಂದು ಹೇಳಿದರು.**

**ಎರಡು ದಿನದ ಹಿಂದೆ ಆರೋಗ್ಯ ಸುಧಾರಣೆಯಾಗಿದೆ ಎಂದು ಅವರ ಶ್ರೀಮತಿ ನನಗೆ ಹೇಳಿದ್ದರು. ಕೋವಿಡ್ ಯಾರನ್ನೂ ಬಿಡಲ್ಲ. ಅಂಗಡಿಯವರಿಗಿಂತ ಬೇರೆ ದೊಡ್ಡ ಉದಾಹರಣೆ ಇನ್ನೊಂದಿಲ್ಲ. ಇದು ಸಾಧ್ಯನಾ ಎಂದು ದಿಗ್ಭ್ರಮೆ ವ್ಯಕ್ತಪಡಿಸಿದರು.**

**ನಂತರ ಮಾತನಾಡಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಮ್ಮ ಭಾಗದ ಬಹು ದಿನಗಳ ಬೇಡಿಕೆಯಾದ ತಾಳಗುಪ್ಪ-ಶಿರಸಿ-ಮುಂಡಗೋ-ಪಾಳಾ-ಹುಬ್ಬಳ್ಳಿ ಮಾರ್ಗದ ರೈಲಿಗೆ ಶ್ರೀಯುತರು ಒಪ್ಪಿದ್ದು ಹಾಗೂ ತಕ್ಷಣದಿಂದ ಸರ್ವೆಗೆ ಆದೇಶಿಸಿರುವುದನ್ನು ಸ್ಮರಿಸಿಕೊಂಡರು.**

**ಅಂಗಡಿಯವರು ಸಿದ್ಧಾರೂಢಮಠಕ್ಕೆ ಹೋಗದೇ ಹುಬ್ಬಳ್ಳಿ ಭೇಟಿ ಮುಂದುವರಿಯುತ್ತಿರಲಿಲ್ಲ. ದೆಹಲಿಯಲ್ಲಿ ನಮ್ಮ ನಮ್ಮ ರಾಜ್ಯದ ಅಭಿವೃದ್ಧಿಗೆ ಕೊಂಡಿಯಾಗಿದ್ದರು ಎಂದು ಹೇಳಿದರು.**

---

**ಸಚಿವ ಜೆ.ಸಿಮಾದುಸ್ವಾಮಿ ಅವರು ಮಾತನಾಡಿ ನಿನ್ನೆ ಸದನ ಮುಗಿಸಿಕೊಂಡು ಹೋದ ತಕ್ಷಣ ಸುದ್ದಿ ತಿಳಿದು ಆಘಾತವಾಯಿತು. ನಿನ್ನೆಯಿಂದ ಆತಂಕ ಇನ್ನೂ ಹೆಚ್ಚಿದೆ. ರಾಜ್ಯ ಕೇಂದ್ರದ ನಡುವೆ ಕೊಂಡಿಯಾಗಿದ್ದರು.**

ಶಿವಮೊಗ್ಗ, ತುಮಕೂರು ಮೊದಲಾದ ಪ್ರಮುಖ ಮೇಲ್ಸೇತುವೆಗಳಿಗೆ ಒಪ್ಪಿಗೆ ನೀಡಿದರು. ರೈಲ್ವೆ ಅನುದಾನ ಹೆಚ್ಚುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರೊಬ್ಬ ನಿಗರ್ವಿ ವ್ಯಕ್ತಿತ್ವ ಹೊಂದಿದ ಚೇತನವಾಗಿದ್ದರು. ಬೆಳಗಾವಿ ರಾಜ್ಯದ ಅವಿಭಾಜ್ಯ ಅಂಗ ಎಂಬ ಭಾವನೆಯನ್ನು ಗಟ್ಟಿಗೊಳಿಸಿದವರಲ್ಲಿ ಅವರು ಪ್ರಮುಖರು ಎಂದು ಸ್ಮರಿಸಿಕೊಂಡರು.

ವಿರೋದ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ ಎರಡನೇ ಬಾರಿಗೆ ಈ ಸದನದಲ್ಲಿ ಸಂತಾಪ ಸೂಚಿಸುತ್ತಿರುವುದು ಮನಸ್ಸಿಗೆ ತುಂಬಾ ನೋವು ಎನಿಸಿದೆ. ಕಳೆದ ವಾರವಷ್ಟೆ ರಾಜ್ಯದ ಮತ್ತೊಬ್ಬ ಸದಸ್ಯ ಗಸ್ತಿಯವರು ನೆನಪು ಮಾಸುವ ಮುನ್ನವೇ ಇನ್ನೊಂದು ಘಟನೆ ನಡೆದಿದೆ ಎಂದರು.

ಅಂಗಡಿಯವರು ಹಳ್ಳಿಗಾಡಿನ ಮಕ್ಕಳಿಗೆ ಶಿಕ್ಷಣ ಸಿಗಬೇಕು ಎಂಬ ಕಾರಣಕ್ಕೆ ಶ್ರಮಿಸಿದ್ದರು. ಕೊರೊನಾದಿಂದ ಸಾಯ್ತಾರೆ ಎಂಬ ನಿರೀಕ್ಷೆ ಇರಲಿಲ್ಲ. ಪ್ರಖ್ಯಾತ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಕ್ಕಿತ್ತು. ರಾಜಕಾರಣಿಗಳಿಗೆ ಆತಂಕ ಶುರುವಾಗಿದೆ. ಮಂತ್ರಿಯಾಗಿದ್ದ ಅಂಗಡಿಯಂಥವರೇ ಸತ್ತರು. ಅತ್ಯುನ್ನತ ಚಿಕಿತ್ಸೆ ಸಿಕ್ಕರೂ ರೋಗಕ್ಕೂ ತುತ್ತಾದರೆ ಬೇರೆಯವರ ಪಾಡೇನು ಎನ್ನುವ ಪ್ರಶ್ನೆ ಜನರಲ್ಲಿ ಮೂಡಿದೆ. ಗಸ್ತಿಯವರು ಹೀಗಾಯಿತು. ಈಗ ನಾರಾಯಣರಾವ್ ಸಾವು ಬದುಕಿನ ಹೋರಾಟ ನಡೆಸುತ್ತಿದ್ದಾರೆ. ಮತ್ತೆ ಬರಲ್ಲ ಎನ್ನುವುದಕ್ಕೆ ಯಾವುದೇ ಖಾತರಿಯೂ ಇಲ್ಲ. ಆದ್ದರಿಂದ ಎಲ್ಲರೂ ಎಚ್ಚರಿಕೆ ವಹಿಸಿ ಎಂದು ಹೇಳಿದರು.

ಅಮೇರಿಕ ಅಧ್ಯಕ್ಷ ಹೇಳಿದ್ದರಲ್ಲ ಮಾಸ್ಕ್ ಹಾಕ್ಕೊಳಲ್ಲ ಅಂತ. ಆ ಭಾವನೆ ಬಿಡಿ. ಚುನಾಯಿತ ಪ್ರತಿನಿಧಿಗಳಿಗೆ ಜನಸಂಪರ್ಕ ಅನಿವಾರ್ಯ. ಮಾಸ್ಕ್ ತೆಗೀರಿ ಸಾರ್. ಸೆಲ್ಫಿ ತೊಗೊಳ್ಳೋಣ ಅಂತಾರೆ. ನನಗೆ ಹೀಗಾಗಿ ಮಂಡ್ಯದಲ್ಲಿ ಬಂತೋ ಮೈಸೂರಲ್ಲಿ ಯಾವ ಕಾರಣಕ್ಕೆ ಬಂತೋ ಗೊತ್ತಿಲ್ಲ. ಅಂಗಡಿ ನಿಧನ ನಂತರ ನನಗೆ ಹೆಚ್ಚು ಆತಂಕವಾಗ್ತಿದೆ. ಭಯ ಪಡಬೇಡಿ. ಭಾಳ ಜನ ಭಯದಿಂದ್ಲೇ ಸತ್ತು ಹೋಗ್ತಾರೆ. ಮುನ್ನೆಚ್ಚರಿಕೆ ಅಗತ್ಯ ಎಂದು ಕಿವಿಮಾತು ಹೇಳಿದರು.

ವಿಧಾನಸಭೆಯ ಉಪಾಧ್ಯಕ್ಷ ಆನಂದ ಚಂದ್ರಶೇಖರ ಮಾಮನಿ ಅವರು ಮಾತನಾಡಿ ಬೆಳಗಾವಿ ಬೆಂಗಳೂರು ರೈಲ್ವೆ ಪ್ರಾರಂಭಿಸಿ ಅನುಕೂಲ ಮಾಡಿಕೊಟ್ಟವರು ಅಂಗಡಿಯವರು. ಬೆಳಗಾವಿ-ಕಿತ್ತೂರು-ಧಾರವಾಡ ಮಾರ್ಗ ಆರಂಭಕ್ಕೆ ಕಾರಣರಾದರು ಎಂದು ಸ್ಮರಿಸಿಕೊಂಡರು.

ಕಾಂಗ್ರೇಸ್ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ ಮಕ್ಳ ಮದುವೆ ಮಾಡಬೇಕು. ಮನೆ ಕಟ್ಟಬೇಕು ಅಂದ್ರೆ ಯಮ ಕೇಳಲ್ಲ. ಅವನು ಮಾಡೋದನ್ನೇ ಮಾಡೋದು. ಯಮನಿಗೆ ಯಾರ ಬಗ್ಗೆನೂ ಕರುಣೆ ಇಲ್ಲ. ನಾನೂ ಇದು ಬೋಗಸ್ ಎಂದಿದ್ದೆ. ನನಗೆ ಕೊರೋನ ಬಂದಾಗ ಮೊದಲು ಜ್ವರ ಬಂತು. ನಂತರ ಉಸಿರಾಟ ಸಮಸ್ಯೆ ಶುರುವಾಯಿತು. ಅದನ್ನು ಅನುಭವಿಸಿ ಹೊರಬಂದಾಗ ಏನು ಅನಿಸಲಿಲ್ಲ ಆದರೆ ಈಗ ಗಂಭೀರತೆ ಅರ್ಥವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಸದನದ ಅನೇಕ ಸದಸ್ಯರು ಶ್ರೀಯುತ ಅಂಗಡಿಯವರ ಕುರಿತು ಮಾತನಾಡಿ ಅವರ ಒಡನಾಟ ಹಾಗೂ ಕೊಡುಗೆಯನ್ನು ಸ್ಮರಿಸಿಕೊಂಡರು. ನಂತರ ಒಂದು ನಿಮಿಷ್ ಮೌನಾಚರಣೆಯ ನಂತರ ಅರ್ಧ ಗಂಟೆ ಸಧನವನ್ನು ಮುಂದೂಡಿ ಮತ್ತೇ ಪ್ರಾರಂಭಿಸಲಾಯಿತು.

ಛಾಯಾಚಿತ್ರ ಶೀರ್ಷಿಕೆ)

ಕೇಂದ್ರ ಸಚಿವ ಸುರೇಶ್ ಅಂಗಡಿ ಅವರ ನಿಧನಕ್ಕೆ ವಿಧಾನ ಸಭೆ ಅಧಿವೇಶನಲ್ಲಿ ಇಂದು ಮುಖ್ಯಮಂತ್ರಿಗಳು ಹಾಗೂ ಸದನದ ಸದಸ್ಯರ ಸಂತಾಪ ಸೂಚಿಸಿದರು.

## ದತ್ತು ಸ್ವೀಕಾರ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ) :

ಮೈಸೂರು ಮೃಗಾಲಯದ "ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ ರಾಘವೇಂದ್ರ ಎನ್.ಆರ್. ಚನ್ನಪಟ್ಟಣ ಇವರು ಕಾಳಿಂಗ ಸರ್ಪ ಹಾಗೂ ಕರ್ನಾಟಕ ರಿಜಿಸ್ಟರ್ಡ್ ಫಾರ್ಮಾಸಿಸ್ಟ್ ಅಸೋಸಿಯೇಷನ್, ಮೈಸೂರು ಇವರು ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ ನ್ನು ದತ್ತು ಸ್ವೀಕರಿಸಿದ್ದಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## 2019 ನೇ ಸಾಲಿನ ಪುಸ್ತಕ ಬಹುಮಾನಕ್ಕಾಗಿ ಜಾನಪದ ಕೃತಿಗಳ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 24 (ಕರ್ನಾಟಕ ವಾರ್ತೆ) :

ಕರ್ನಾಟಕ ಜಾನಪದ ಅಕಾಡೆಮಿಯು 01-01-2019 ರಿಂದ 31-12-2019 ರವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಂಡಿರುವ ಕನಿಷ್ಠ 150 ಪುಟಗಳ ಮಿತಿಯಲ್ಲಿರುವ ಜಾನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ-ವಿಮರ್ಶೆ-ಸಂಶೋಧನೆ, ಜನಪದ ಸಂಕೀರ್ಣ, ಈ ನಾಲ್ಕು ಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿಯಲ್ಲಿ ಜಾನಪದ ಕೃತಿಗಳನ್ನು ಪುಸ್ತಕ ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು/ಪ್ರಕಾಶಕರು/ಸಂಪಾದಕರು 4 ಕೃತಿಗಳನ್ನು ದ್ವಿಪ್ರತಿ ಬಿಲ್ಲಿನೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2 ನೇ ಮಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು -2 ಇವರಿಗೆ 25-09-2020 ರೊಳಗೆ ಖುದ್ದಾಗಿ, ಕೊರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿಕೊಡಲು ಪ್ರಕಟಣೆ ತಿಳಿಸಿದೆ.

## ಪಿ.ಯು.ಸಿ. ಪಾಸಾದ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ

ಬೆಂಗಳೂರು, ಸೆಪ್ಟೆಂಬರ್ 24, (ಕರ್ನಾಟಕ ವಾರ್ತೆ) :

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ, ಕೇಂದ್ರ ಸರ್ಕಾರ, ನವದೆಹಲಿ ಇವರ ವತಿಯಿಂದ 2020ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ **Top 20$^{th}$ Perecentlie or 80$^{th}$ percentile** ಗಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಂದ **Central Sector Scheme of Scholorship for College and University Students** ಗಳಿಗೆ **online** ಮೂಲಕ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಈ ಸಂಬಂಧವಾಗಿ ಕೇಂದ್ರ ಸರ್ಕಾರದ ವತಿಯಿಂದ **website:www.scholarships.gov.in**ನಲ್ಲಿ **National e-Scholorship Portal**ನಲ್ಲಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ. ಆದಕಾರಣ, ಈ **portal** ನ್ಲಲಿಯೇ **2020**ರ **Fresh Batch**ನ ವಿದ್ಯಾರ್ಥಿಗಳು ಅರ್ಜಿಗಳನ್ನು **"online"** ಮೂಲಕ ಸಲ್ಲಿಸುವಂತೆ ಹಾಗೂ ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲಿಚ್ಛಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಹೊಂದಿರಬೇಕು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **31–10–2020.**

# ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನ

## ನವೀಕರಣಕ್ಕೆ "online" ಮೂಲಕ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 24, (ಕರ್ನಾಟಕ ವಾರ್ತೆ) :**

**2016ನೇ, 2017ನೇ, 2018ನೇ ಹಾಗೂ 2019ನೇ** ಸಾಲಿನಲ್ಲಿ ಕೇಂದ್ರ ಸರ್ಕಾರದ **Direct Benefit Transfer(DBT) Programme"** ನ ಅಡಿಯಲ್ಲಿ ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಅವರ ಎಲ್ಲಾ ನವೀಕರಣಗಳನ್ನು **"online"** ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕಾಗಿದೆ.

ಈ ಸಂಬಂಧವಾಗಿ ಕೇಂದ್ರ ಸರ್ಕಾರದ ವತಿಯಿಂದ **website:www.scholarships.gov.in**ನ **National e-Scholarship Portal**ನಲ್ಲಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ. ಆದಕಾರಣ, ಎಲ್ಲಾ ಸಾಲಿನ ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ನವೀಕರಣದ ನಿಮಿತ್ತ ಈ **portal**ನಲ್ಲಿಯೇ ಅರ್ಜಿಗಳನ್ನು **"online"** ಮೂಲಕ ಸಲ್ಲಿಸಬೇಕು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **31–10–2020** ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 24, (ಕರ್ನಾಟಕ ವಾರ್ತೆ) :**

**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಾರ್ವಜನಿಕ ಉದ್ದಿಮೆಗಳ ಸಚಿವ ಜಗದೀಶ್ ಶೆಟ್ಟರ್ ಸೆಪ್ಟೆಂಬರ್ 25 ರಂದು ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಸಂತಾಪ

ರೈಲ್ವೆ ಖಾತೆ ರಾಜ್ಯ ಸಚಿವರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದ ಸಜ್ಜನ ರಾಜಕಾರಣಿ **ಶ್ರೀ ಸುರೇಶ್ ಅಂಗಡಿಯವರ** ಅಕಾಲಿಕ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ** ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸರಳ ಸಜ್ಜನಿಕೆಗೆ ಹೆಸರಾಗಿದ್ದ ಮಾನ್ಯ ಸಚಿವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ದೆಹಲಿಗೆ ನಿಯೋಗ ಹೋದಾಗಲೆಲ್ಲಾ ಕರ್ನಾಟಕದ ಸಮಸ್ಯೆಗಳಿಗೆ ಭಾವನಾತ್ಮಕವಾಗಿ ಸ್ಪಂದಿಸುತ್ತಿದ್ದರು. ಸುರೇಶ್ ಅಂಗಡಿಯವರೂ ಸಹ ಖುದ್ದು ನಿಯೋಗದೊಂದಿಗೆ ಇದ್ದು ರಾಜ್ಯದ ಎಲ್ಲ ಕೇಂದ್ರ ಸಚಿವರನ್ನು ಭೇಟಿ ಮಾಡಲು ಸಹಕರಿಸುತ್ತಿದ್ದರು. ಕನ್ನಡ, ಕರ್ನಾಟಕದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಏನೇನು ಕೆಲಸಗಳನ್ನು ಮಾಡಬೇಕು ಎಂಬುದನ್ನು ನಮಗೆ ತಿಳಿಸಿಕೊಟ್ಟು, ಅತ್ಯಂತ ಸಹೃದಯಿ, ಧೀಮಂತ ರಾಜಕಾರಣಿ ಕೊರೋನಾಗೆ ಬಲಿಯಾಗಿದ್ದು, ಕರ್ನಾಟಕದ ದುರ್ದೈವ ಎಂದು ದುಃಖ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಸಮನ್ವಯಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಮಾನ್ಯ ಸಚಿವರ ಅಗಲಿಕೆ ಅತ್ಯಂತ ನೋವಿನ ಸಂಗತಿಯಾಗಿದ್ದು, ಅವರ ಕುಟುಂಬ ವರ್ಗಕ್ಕೆ, ಅಭಿಮಾನಿಗಳಿಗೆ, ಆಪ್ತ ವಲಯಕ್ಕೆ ದುಃಖಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವೆ ಎಂದಿದ್ದಾರೆ.